ಇದೆ. ಈ ಸಮುದಾಯಗಳು ಯಜಮಾನ ಸಂಸ್ಕೃತಿಯ ಹಿಂಸಾತ್ಮಕ ನೆಲೆಗಳನ್ನು ಭೇದಿಸಿ, ನೈಸರ್ಗಿಕ ಅನುಸಂಧಾನದೊಂದಿಗೆ, ದೈವಿಕವಾಗಿ ಕಟ್ಟಿಕೊಳ್ಳುವ ಬದುಕಿನ ಅನಂತ ಸಾಧ್ಯತೆಗಳನ್ನು ಈ ಕೃತಿ ಶೋಧಿಸುತ್ತದೆ. ಪಠ್ಯಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಮಾಡುವ ಸಂಶೋಧಕರಿಗೆ ಈ ಕೃತಿ ಮಾದರಿ ಅಧ್ಯಯನವಾಗಿದೆ.

'ಕರಾವಳಿ ಕಥನಗಳು' ಕೃತಿಯಲ್ಲಿ ಖಚಿತ ಅಧ್ಯಯನದ ಎಂಟು ಲೇಖನಗಳಿವೆ. ಪಾಡ್ದನಗಳ ಒಳಗಿನಿಂದ ಪಾಡ್ದನಗಳು ಬಗೆದು ಕಟ್ಟಿದ ಲೋಕದೃಷ್ಟಿ ಲೇಖನದಲ್ಲಿ ಮನುಷ್ಯನಾಳದ ಸಾಂಸ್ಕೃತಿಕ ರಚನೆಗಳಾದ ತುಳು ಪಾಡ್ದನಗಳ ಸ್ವಾಯತ್ತತೆ ಹಾಗೂ ಸೃಷ್ಟಿ ನೋಟವನ್ನು ಸುದೀರ್ಘವಾಗಿ ಚರ್ಚಿಸಿದ್ದಾರೆ. ಹಲವು ಬಗೆಯ ಪಾಡ್ದನಗಳು ತುಳುನಾಡಿನಲ್ಲಿ ಜನರ ನಾಲಿಗೆಯ ಮೇಲೆ ನಲಿಯುತ್ತಿವೆ. ಈ ಪಾಡ್ದನಗಳ ತಂತು ಯಾವ ಬಗೆಯಲ್ಲಿ ಚರಿತ್ರೆ, ಪುರಾಣ, ವಾಸ್ತವಗಳ ಬಿಂದುವಿನಲ್ಲಿ ಸಂಧಿಸಿ, ಶಿಷ್ಟಕ್ಕೆ ಭಿನ್ನವಾಗಿ ಲೋಕದೃಷ್ಟಿಯನ್ನು ಕಟ್ಟಿಕೊಡುತ್ತವೆ ಎಂಬ ತತ್ವವೊಂದನ್ನು ಪ್ರತಿಪಾದಿಸುತ್ತಾರೆ. ಅವರೇ ಹೇಳುವಂತೆ 'ತುಳುನಾಡಿನ ಪುರಾಣ ಕಾವ್ಯಗಳಾಗಿರುವ ಕಲ್ಕುಡ, ಕಲ್ಲುರ್ಟಿ, ಕೊರಗ ತನಿಯ, ಬಿಲ್ಲರಾಯ ಬಿಲ್ಲಾರ್ತಿ, ಪಂಜುರ್ಲಿ ಮತ್ತಿತರ ಕೆಲವು ಜನಪದ ಕಾವ್ಯಗಳನ್ನು ಸೂಕ್ಷ್ಮ ವಿಶ್ಲೇಷಣೆಗೆ ಒಳಪಡಿಸಲಾಗಿದೆ. 'ಕಲ್ಕುಡ ಕಲ್ಲುರ್ಟಿ' ಕಥಾನಕದಲ್ಲಿ ಕಾರ್ಮಿಕ ಮತ್ತು ಅರಸ, ಹಸಿವೆ ಮತ್ತು ಅಹಂಕಾರ, ದುಡಿಮೆ ಮತ್ತು ಪ್ರತಿಷ್ಠೆ ಮೊದಲಾದ ವಿರುದ್ಧ ಮೌಲ್ಯಗಳನ್ನು ಪ್ರತಿನಿಧಿಸುವ ಎರಡು ಜಗತ್ತುಗಳ ಸಂಘರ್ಷ ತಿಕ್ಕಾಟಗಳನ್ನು ಕಾಣಬಹುದು. ಸೃಷ್ಟಿಯ ವಿಕಾಸ, ವಲಸೆ ಸಂಘರ್ಷ ಮತ್ತು ಸಮನ್ವಯ ಒಟ್ಟಿಗೆ ಕುಳಿತು ಉಣ್ಣುವ ಅವಕಾಶದ ನಿರಾಕರಣೆ, ಲೈಂಗಿಕ ಬಯಕೆ, ಮದುವೆ ಸಂತಾನದ ಅಪೇಕ್ಷೆ, ಗಂಡಸಿನ ಕ್ರೌರ್ಯ ಮತ್ತು ಹೆಣ್ಣಿನ ತಾಯ್ತನ ಮೊದಲಾದ ವಿಷಯಗಳನ್ನು ಚರ್ಚಿಸುವ ಪಂಜುರ್ಲಿ ಪಾಡ್ದನದಲ್ಲಿ ಇರುವುದು ಹಂದಿಯ ಕಥೆಯಲ್ಲ, ಮನುಷ್ಯರ ಕಥೆ. ಇದರಲ್ಲಿ ಪ್ರಾಣಿ ವರ್ಗದಿಂದ ಮನುಷ್ಯ ವರ್ಗಕ್ಕೆ ಕಥೆ ಪಲ್ಲಟಗೊಳ್ಳುವುದನ್ನು ಸೂಕ್ಷ್ಮವಾಗಿ ಗಮನಿಸಬೇಕು.

'ಬಿಲ್ಲರಾಯ ಬಿಲ್ಲಾರ್ತಿ' ಒಂದು ದುರಂತ ಪ್ರೇಮ ಕಾವ್ಯ ಪ್ರಕರಣ. ಕೊರಗತನಿಯನು ಮೇಲ್ವರ್ಗದ ವಿರುದ್ಧ ನಡೆಸುವ ಹೋರಾಟದ ವಿನ್ಯಾಸಗಳು ಬೇರೆಯಾಗಿವೆ. ಪಾಡ್ದನಗಳ ಸಾರ್ವತ್ರಿಕ ಮೌಲ್ಯಗಳು ಯಾವುವು? ಜಾತಿಯಾಧಾರಿತ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಪಾಡ್ದನಗಳ ಮೂಲಕ ಜನಸಾಮಾನ್ಯರು ಪ್ರಕಟಿಸುವ ಪ್ರತಿಕ್ರಿಯೆಗಳೇನು? ಮಧ್ಯಕಾಲೀನ ತುಳುನಾಡಿನ ಹೋರಾಟಗಳನ್ನು ಸಂಘಟಿಸಿರುವ ವಿನ್ಯಾಸಗಳ ಸ್ವರೂಪಗಳೇನು? ದಲಿತ ಕಾರ್ಮಿಕ ವರ್ಗದ ಹೋರಾಟಗಳನ್ನು ಹತ್ತಿಕ್ಕಿದ ಶಕ್ತಿಗಳು ಯಾವುವು? ಸಮುದಾಯಗಳ ಹೋರಾಟಗಳನ್ನು ದುರ್ಬಲಗೊಳಿಸಲು ಅಧಿಕಾರ




**ಕರಾವಳಿ ಕಥನಗಳು**
ಲೇ: ಕೆ. ಚಿನ್ನಪ್ಪ ಗೌಡ
ಪು: 300; ಬೆಲೆ 350,
ಪ್ರ: ಸಂತ ಅಲೋಶಿಯಸ್ ಪ್ರಕಾಶನ, ಮಂಗಳೂರು.
ಫೋನ್: 08244117701